ISSN : 2320-0391

# सृजन ಸೃಜನ

हिन्दी-कन्नड साहित्य और संस्कृति

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

जुलाई - सितम्बर २०१६

त्रैमासिक पत्रिका



Scanned by CamScanner

# ಪರಿವಿಡಿ


| | | | |
|---|---|---|---|
| ೧. | ನಾಗೇಶ ಶೆಟ್ಟಿ : ಒಂದು ಪರಿಚಯ | • ಡಾ. ಎಸ್. ಟಿ. ಮೇರವಾಡೆ | ೪೩ |
| ೨. | ಉದ್ಯೋಗ ಪರ್ವದಲ್ಲೇನಿದೆ......? | • ಡಾ. ಆರ್. ವಿ. ಪಾಟೀಲ | ೪೭ |
| ೩. | ಆಕರ್ಷಕ ವ್ಯಕ್ತಿತ್ವದ ಶ್ರೀ ನಾಗೇಶ ಮಾಲಕರು | • ಪ್ರೊ. ಬಿ. ಬಿ. ಡೆಂಗನವರ | ೫೦ |
| ೪. | ಕನ್ನಡ ದಲಿತ ಬಂಡಾಯ ಕಾದಂಬರಿಗಳಲ್ಲಿ 'ನೋವು' ಮರು ಚಿಂತನೆ | • ಶ್ರೀ ಲಕ್ಷ್ಮೀಕಾಂತ ಹೂಗಾರ | ೫೪ |
| ೫. | ತ.ರಾ.ಸು ಐತಿಹಾಸಿಕ ಕಾದಂಬರಿಗಳಲ್ಲಿ ಸ್ತ್ರೀ ಚಿತ್ರಣ | • ಶ್ರೀ ಸಂಗಯ್ಯ ಶಿವಪ್ಪಯ್ಯನಮಠ | ೬೧ |
| ೬ | ಸಂಸ್ಕೃತಿ ಮತ್ತು ಜನಪದ ರಂಗಭೂಮಿ | • ಪ್ರೊ. ಎಸ್. ಪಿ. ಮದ್ರೇಕರ್ | ೬೪ |
| ೭. | ಮಲೆನಾಡಿನ ಕೃಷಿ ಕಾರ್ಮಿಕರ ಸ್ಥಿತಿ ಗತಿಗಳು | • ಸಂದೀಪ್ ಡಿ .ಡಿ ಮತ್ತು ಸಂಧ್ಯಾ .ಹೆಚ್.ಎಸ್ | ೬೮ |
| ೮. | ಶಂಕರ ಮೋಕಾಶಿ ಪುಣೇಕರ ಅವರ ಕಾದಂಬರಿಯಲ್ಲಿ ಅವಧೇಶ್ವರಿಯಾಗಿ – ರಾಣಿ ಪುರುಕುತ್ಸಾನಿಯ ಪಾತ್ರ | • ಜಯಶ್ರೀ ಇಂಗಳೆ | ೭೫ |
| ೯. | ಜೈನ ರಾಮಾಯಣದ ವೈಶಿಷ್ಟ್ಯಗಳು | • ಶ್ರೀಮತಿ ಮೀನಾಕ್ಷಿ ಪಾಟೀಲ | ೭೮ |
| | **ಕವಿತೆ** | | |
| ೧೦. | ಸೊಗಡಿನೊಳಗ ಕಂಡ ಸೊಬಗ | • ಕುಮಾರಿ : ಅಪೂರ್ವ ಮಾಲಿನ | ೬೭ |


■■



Scanned by CamScanner

# ಆಕರ್ಷಕ ವ್ಯಕ್ತಿತ್ವದ ಶ್ರೀ ನಾಗೇಶ ಮಾಲಕರು

• ಪ್ರೊ. ಬಿ. ಬಿ. ಡೆಂಗನವರ

ಬಿಸಿಲನಾಡು ಬರದ ನಾಡು ಕೃಷ್ಣಾ
ಭೀಮಾ ಡೋಣಿ ಹರಿವ ನಾಡು
ಫಲವತ್ತಾದ ಸಮೃದ್ಧ ಭೂಮಿ

"ಡೋಣಿ ಹರಿದರೆ ಓಣೆಲ್ಲ ಜೋಳ" ಎಂಬ ಮಾತಿದೆ ವಿಜಯಪುರ ಜಿಲ್ಲೆಯಲ್ಲಿ ಪಂಚನದಿಗಳು ಹರಿದಿರುವದರಿಂದ ಕರ್ನಾಟಕದ ಪಂಜಾಬ ಎಂದು ಕರೆಂಯುತ್ತಾರೆ. ತೋಟಗಾರಿಕೆ ಬೆಳೆಗಳಿಗೆ ಹೆಸರುವಾಸಿಯಾಗಿರುವದರಿಂದ ಕರ್ನಾಟಕದ ಇಸ್ರೇಲ್ ಎಂದು ಕರೆಯುತ್ತಾರೆ.

ಆದಿಲಶಾಹಿ ಸಾಮ್ರಾಜ್ಯದ ರಾಜತ್ವದ ಹೆಮ್ಮೆಯ ವಿಜಾಪುರ ಅನೇಕ ಏಳು ಬೀಳುಗಳನ್ನು ಕಂಡಿದೆ. ವಿಜಯಪುರವು ಅಂದು ೨೨ ಮೈಲು ಪ್ರದೇಶದಷ್ಟು ವಿಸ್ತೀರ್ಣವಾಗಿತ್ತು. ಸುಂದರ ವಾಸ್ತುಕಲೆಗಳನ್ನು ಹೊಂದಿದೆ. ಇಂಡೋಪರ್ಶಿಯನ್ ಭವ್ಯಸ್ಮಾರಕಗಳ ಪಟ್ಟಣ ಆಸಾರಮಹಲ, ಜೋಡಗುಮ್ಮಟ, ಉಪ್ಪಲಿಬುರಜ, ಇಬ್ರಾಹಿಮ್ ರೋಜಾ, ಚಾಂದಬಾವಡಿ, ತಾಜಬಾವಡಿ, ಮಲಿಕ್–ಎ ಮೈದಾನ ತೋಫ, ಮೆಹತರ ಮಹಲ, ಆನಂದ ಮಹಲ, ಗಗನ ಮಹಲ, ಮೋತಿಗುಂಬಜ, ಅಫಜಲಖಾನ್ ಅರಮನೆ ಮತ್ತು ಅರವತ್ತೂರು ಗೋರಿಗಳು [ಸಾಟಖಬರ], ಫಾರುಖಮಹಲ ಈ ಎಲ್ಲ ಭವ್ಯ ಸ್ಮಾರಕಗಳ ಸಂಗಮವಾಗಿದೆ. ಮಧ್ಯಯುಗಿನ ಭಾರತದ ಇತಿಹಾಸದಲ್ಲಿ ವಿಜಾಪುರ ಮತ್ತು ಆದಿಲ್ ಶಾಹಿಗಳ ಪಾತ್ರ ಬಹುದೊಡ್ಡದಾಗಿದೆ.ಇಂದಿನ ಕರ್ನಾಟಕದ ಉತ್ತರದ ಗಡಿಯಲ್ಲಿದ್ದ ಒಂದು ಜಿಲ್ಲೆಯ ನಗರ ವಿಜಾಪುರವು ಸುಮಾರು ಇನ್ನೂರು ವರುಷಗಳ ವರೆಗೆ ಆದಿಲಶಾಹಿಗಳ ರಾಜಧಾನಿಯಾಗಿತ್ತು. [ಕ್ರಿಶ ೧೪೮೯–೧೬೮೬] ಸುಮಾರು ಒಂದು ನೂರು ವರುಷಕ್ಕಿಂತ ಅಧಿಕಕಾಲ ದಕ್ಷಿಣ ಭಾರತದ ಮೂರರಲ್ಲಿಯ ಎರಡು ಭಾಗವನ್ನು ವಿಜಾಪುರ ರಾಜಧಾನಿಯಿಂದ ಆದಿಲಶಾಹಿಗಳು ಆಳಿದರು[ಕ್ರಿ.ಶ ೧೬೬೫-೧೬೭೨] ರ ವರೆಗೆ ಮುಂಬಯಿಂದ ತಂಜಾವೂರು ಕರ್ನಾಟಕದವರೆಗೆ ಉತ್ತರ ದಕ್ಷಿಣದಲ್ಲಿ ಗೋವೆಯಿಂದ ಕರ್ನೂಲಿನವರೆಗೆ ಪಶ್ಚಿಮ ಪೂರ್ವಗಳಲ್ಲಿ ವಿಶಾಲವಾಗಿ ರಾಜ್ಯ ಹಬ್ಬಿತ್ತು. ಆದರೆ ವಿಜಾಪುರ ನಗರ ಮತ್ತು ಜಿಲ್ಲೆಯು ಆದಿಲಶಾಹಿಗಳಿಂದಲೇ ಚರಿತ್ರೆಯಲ್ಲಿ ಸ್ಥಾನ ಪಡೆದಿದೆ ಎಂದು ಹೇಳಲಿಕ್ಕಾಗದು.

ವಿಜಾಪುರದ ಇತಿಹಾಸವು ಬಹುಪ್ರಾಚೀನವಾದುದು. ರಾಮಾಯಣ ಕಾಲದ ದಂಡಕಾರಣ್ಯದ ಒಂದು ಭಾಗವಾಗಿತ್ತೆಂದು ಹೇಳುತ್ತಾರೆ. ಆದರೆ ವಿಜಾಪುರ ಪರಿಸರದ ಅತಿ ಹಳೆಯ ಐತಿಹಾಸಿಕ ದಾಖಲೆ ದೊರೆಯುವುದು ಕ್ರಿ.ಶ ಪೂರ್ವ ೨ನೆಯ ಶತಮಾನದ ಈಜಿಪ್ತಿನ ಖ್ಯಾತ ಭೂಗೋಳ ಶಾಸ್ತ್ರಜ್ಞ ಟಾಲೆಮಿಯ ಉಲ್ಲೇಖಗಳಿಂದ ತಿಳಿದು ಬರುವುದೇನೆಂದರೆ ಆವನ ಕೃತಿಗಳಲ್ಲಿ ಬಾದಾಮಿ ಕಲಕೇರಿ, ಮುದಗಲ್ಲ ಪಟ್ಟದಕಲ್ಲು ಮತ್ತು ಇಂಡಿ ಊರುಗಳ ಉಲ್ಲೇಖವನ್ನು ಮಾಡಿದ್ದಾನೆ. ನಂತರದ ೬ನೆಯ ಶತಮಾನದ ಬಾದಾಮಿಯ ಚಾಲುಕ್ಯರ ಶಾಸನಗಳಲ್ಲಿ ಕ್ರಿ.ಶ. ೬ ರಿಂದ ೯ನೆಯ ಶತಮಾನದವರೆಗೆ ವಿಜಾಪುರವು ಬಾದಾಮಿಯ ಚಾಲುಕ್ಯರ ಅಧೀನದಲ್ಲಿತ್ತು. ವಿಜಾಪುರವು ಕಲ್ಯಾಣಿ ಚಾಲುಕ್ಯರ ಖ್ಯಾತರಾಜನಾದ ಆರನೆಯ ವಿಕ್ರಮಾದಿತ್ಯನ ಆಂಶಿಕಕಾಲಿನ ರಾಜಧಾನಿಯಾಗಿತ್ತೆಂದು ಕ್ರಿ.ಶ. ೧೦೭೪ರ ಶಾಸನವೊಂದು ಹೇಳುತ್ತದೆ. ವಿಜಾಪುರದ ಕುರಿತು ಅನೇಕ ಶಾಸನಗಳು ಉಪಲಬ್ಧ ಇವೆ. ಶಾಸನಗಳಲ್ಲಿ ಉಲ್ಲೇಖವಾದಂತೆ ಬಾದಾಮಿಯ ಚಾಲುಕ್ಯರ ಮಾಂಡಲೀಕನೊಬ್ಬನು ವಿಜಾಪುರ ನಗರವನ್ನು ಕಟ್ಟಿದನು. ಅದಕ್ಕೆ ವಿಜಯಪುರ ಎಂದು ಹೆಸರಿಟ್ಟನು. ಇನ್ನೊಂದು

ಹೇಳಿಕೆಯಂತೆ ಅಗ್ರಹಾರವಾದ ಬಿಜ್ಜನ ಹಳ್ಳಿಯು ಮಾಂಡಲೀಕನೊಬ್ಬನ ರಾಜಧಾನಿಯಾದಾಗ ಬಿಜ್ಜಪುರವಾಯಿತು. ಅದುವೇ ಮುಂದಿನ ದಿನಗಳಲ್ಲಿ ವಿದ್ಯಾ-ಬಿಜ್ಜ ಬಿಜಾಪುರವಾಯಿತೆಂದು ಹೇಳುತ್ತಾರೆ.

ಗಜಕನಹಳ್ಳಿ, ಬಜಕನಹಳ್ಳಿ, ಚಂದನಕೇರಿ, ಕ್ಯಾದಗಿ, ಕ್ಯಾತನಕೇರಿ, ಕುರುಬನ ಹಟ್ಟಿ, ಮತ್ತು ಕುಜನಕುಟ ಎಂಬ ಏಳು ಹಳ್ಳಿಗಳು ಸೇರಿ ಬಿಜ್ಜನಹಳ್ಳಿಯಾಯಿತೆಂದು ಒಂದು ದಂತಕತೆಯಿದೆ. ಇದೇ ಬಿಜ್ಜಳನಹಳ್ಳಿ ಸಂಸ್ಕೃತೀಕರಣವಾಗಿ ವಿದ್ಯಾಪುರವಾಗಿ ವಿಜಾಪುರವಾಯಿತು. ಬಿಜಾಪುರವೂ ಆಯಿತು. ಈ ಏಳು ಹಳ್ಳಿಗಳ ಸೇರ್ಪಡೆ ಎಂದು? ಯಾವಾಗ? ಯಾಕೆ? ಆಯಿತೆಂಬ ಉಲ್ಲೇಖಗಳು ದೊರೆಯುವದಿಲ್ಲ. ಆದರೆ ಬಿಜ್ಜನಹಳ್ಳಿಯ ಉಲ್ಲೇಖ ಮಾತ್ರ ಕ್ರಿ.ಶ. ೧೦೭೪-೧೦೭೫ ರ ಒಂದು ಶಾಸನದಲ್ಲಿ ದೊರೆಯುತ್ತದೆ. ಭಾಗಶಃ ಸಂಸ್ಕೃತ ಕನ್ನಡದಲ್ಲಿರುವ ಈ ಶಾಸನದಲ್ಲಿ ವಿಜಾಪುರದ ಸ್ವಯಂಭುಸಿದ್ಧೇಶ್ವರ ಗುಡಿಗೆ ಬಿಜ್ಜನ ಹಳ್ಳಿಯ ಭೂಮಿಯನ್ನು ದಾನವಾಗಿ ಕೊಟ್ಟರೆಂಬ ಉಲ್ಲೇಖವಿದೆ. ಶಾಸನದಲ್ಲಿ ವಿಜಯಪುರ ಮತ್ತು ಬಿಜ್ಜನಹಳ್ಳಿಗಳು ಪ್ರತ್ಯೇಕವಾಗಿ ಉಲ್ಲೇಖಗೊಂಡದ್ದರಿಂದ ಇವೆರಡು ಊರುಗಳು ಬೇರೆ-ಬೇರೆಯಾಗಿರುವ ಸಾಧ್ಯತೆಯೂ ಇದೆ. ಇಂದು 'ಅರಕಿಲ್ಲೆ' ಎಂದು ಗುರುತಿಸಿ ಕೊಳ್ಳುವ ಸ್ಥಳದಲ್ಲೇ ಬಿಜನಹಳ್ಳಿ ಇತ್ತು ಎಂದೂ ಕೆಲವರು ಗುರುತಿಸಿದ್ದಾರೆ. ಆನಂತರದ ಬಹುತೇಕ ಮುಸ್ಲಿಮ ಉಲ್ಲೇಖಗಳು ಈ ನಗರವನ್ನು ವಿದ್ಯಾಪುರ ಎಂದೇ ಕರೆದಿವೆ. ಅಗ್ರಹಾರವಾಗಿದ್ದ ಈ ಸ್ಥಳಕ್ಕೆ ವಿದ್ಯಾ ಶಬ್ದದ ತದ್ಭವ ಬಿಜ್ಜವು ಬಿಜ್ಜನಹಳ್ಳಿಯಾಗಿ ಅನಂತರ ಬಿಜ್ಜಪುರ, ಬಿಜಾಪುರ ಆಗಿರಬೇಕು ಎಂದು ಹಲವಾರು ವಿದ್ವಾಂಸರ ಅಭಿಮತವಾಗಿದೆ.

ವಿಜಾಪುರ ಜಿಲ್ಲೆ ಹೊಳೆಸಾಲು-ಡೋಣಿಸಾಲು ಎಂಬ ಎರಡು ಪ್ರದೇಶಗಳ ನ್ನೊಳಗೊಂಡ ಫಲವತ್ತಾದ ನೆಲ, ಹೊಳೆಸಾಲಿನ ಹೋರಿ, ಡೋಣಿಸಾಲಿನ ಹುಡುಗ ಎರಡೂ ಪ್ರಖ್ಯಾತ. ಅದಕ್ಕಾಗಿಯೇ "ಹೊಳೆಸಾಲ ಹೋರಿ ಹೂಡು, ಡೋಣಿ ಸಾಲ ಬೀಗತನ ಮಾಡು" ಎಂದು ಹೇಳುತ್ತಿದ್ದರು. ನಾವು ನೋಡುನೋಡುತ್ತಿದ್ದಂತೆ ನಮ್ಮ ಕಣ್ಣ ಮುಂದೆಯೇ ಪ್ರಾಕೃತಿಕ ಬದಲಾವಣೆ ಘಟಿಸಿದೆ. ಡೋಣಿ ಹೂಳು ತುಂಬಿ ಭೂಮಿ ಸವಳಾಗಿ ಹೋಗಿದೆ! ಮುತ್ತಿನಂಥ ಬಿಳಿಜೋಳ ಬೆಳೆವ ಭೂಮಿಯ ತುಂಬ ಫಿರಂಗಿ ಜಾಲಿ ಬೆಳೆದಿದೆ. ಕೃಷ್ಣೆ ಸೊರಗಿ ಸಣ್ಣಾಗಿದ್ದು ಒಡಲೊಡೆದು ಹೊರಬರುವುದೇ ಇಲ್ಲ. ಆಡಳಿತ ವಿಭಜನೆಯಿಂದಾಗಿ ಹೊಳೆಸಾಲು ಬಾಗಲಕೋಟ ಜಿಲ್ಲೆಗೆ ಹೋಯಿತು. ವಿಜಾಪುರ ಜಿಲ್ಲೆ ಈಗ ಬರದಬೀಡು. ಈ ಬರದ ನಾಡು ವಿಶ್ವವಿಖ್ಯಾತ ಗೋಳ ಗುಂಬಜದಿಂದ ಜಾಗತಿಕ ನಕ್ಷೆಯಲ್ಲಿ ಗುರುತಿಸುವಂತಾಗಿದೆ. ವಿಜಾಪುರ ಎಂದರೆ ಗೋಳಗುಮ್ಮಟ ನಮ್ಮ ಕಣ್ಣಮುಂದೆ ಸುಳಿಯುವ ಹಾಗೆಯೇ ವಿಜಯಪುರದ ಹೃದಯಭಾಗವೇ ಆಗಿರುವ ನಿತ್ಯ ಸಾವಿರಾರು ಹಸಿದ ಹೊಟ್ಟೆಗೆ ಅನ್ನ ಹಾಕುವ ಪವಿತ್ರ ಕಾಯಕದಲ್ಲಿ ಅರ್ಧಶತಮಾನದಷ್ಟು ಹಿಂದಿನಿಂದ ಹೋಟೆಲ್ ಉದ್ಧಿಮೆ ನಡೆಸುತ್ತ ಬಂದಿರುವ ಮೊದಲ ತಲೆಮಾರಿನ ಕೆ.ಬಾಬುರಾವ್ ಶೆಟ್ಟಿ ಹಾಗೂ ದ್ವಿತೀಯ ತಲೆಮಾರಿನ ಶ್ರೀ ನಾಗೇಶ ಶೆಟ್ಟಿ ಹಾಗೂ ಅವರ ಸಹೋದರರು ಹೋಟೆಲ ಉದ್ಯಮದಲ್ಲಿ ತುಂಬಾ ಯಶಸ್ವಿಯಾಗಿದ್ದಾರೆ. ಇಡೀ ವಿಜಯಪುರದ ಹಾಗೂ ವಿಜಯಪುರದ ಆಸುಪಾಸು ಸುಮಾರು ೫೦ ಕಿಲೋ ಮೀಟರ ವ್ಯಾಪ್ತಿಯವರೆಗೂ ಜನ ನಿತ್ಯ ಮೈಸೂರ ಹೋಟೆಲಿಗೆ ಬಂದು ತಮ್ಮ ನೆಚ್ಚಿನ ತಿಂಡಿ ತಿನಿಸುಗಳನ್ನು ತೃಪ್ತಿಯಿಂದ ತಿಂದು ಭಾರಿಭೋಜನ ಮಾಡಿ ಹೋಗುವ ಪರಿಪಾಠ ವಿಜಯಪುರ ಜನರದ್ದಾಗಿದೆ. ಇಡೀ ವಿಜಾಪುರ ಜಿಲ್ಲೆಯಲ್ಲಿಯೇ ರುಚಿ-ಶುಚಿಗೆ ಹೆಸರುವಾಸಿಯಾಗಿದೆ. ಈ ಹೋಟೆಲಿಗೆ ಜನ ಹೆಚ್ಚಾಗಿ ಬರುವುದಕ್ಕೆ ಮುಖ್ಯ ಕಾರಣವೆಂದರೆ ಈ ಹೋಟೆಲಿನ ಸದ್ಯದ ಮಾಲೀಕರಾದ ಶ್ರೀ ನಾಗೇಶ ಶೆಟ್ಟಿ ಯವರ ನಗುಮೊಗದ ಆಕರ್ಷಕ ವ್ಯಕ್ತಿತ್ವ, ಹೋಟೆಲಿಗೆ ಬಂದ ಎಲ್ಲವರ್ಗದ ಜನರೊಂದಿಗೆ ಅತ್ಯಂತ ಆತ್ಮೀಯವಾಗಿ ಮಾತನಾಡುತ್ತ ಬರಮಾಡಿಕೊಂಡು ಅವರಿಗೆ ಹೊಟೆಲಿನಲ್ಲಿ ತಿಂಡಿ ಹಾಗೂ ಊಟದ ವ್ಯವಸ್ಥೆ ಮಾಡುತ್ತಾರೆ. ಜೊತೆಗೆ ಇವರ ನಮ್ರತೆ ವಿನಯತೆ, ಸೌಜನ್ಯತೆಯನ್ನು ಕಂಡು ಬೇಕಾದಷ್ಟು ಗದ್ದಲವಿದ್ದರೂ ಜನರು ತಾಳ್ಮೆಯಿಂದ ಎಷ್ಟೇ ಹೊತ್ತಾದರೂ ಕಾಯ್ದು ಮೈಸೂರು ಹೋಟೆಲಿನ ಸ್ವಾದಿಷ್ಟವಾದ ರುಚಿಕಟ್ಟಾದ ಆಹಾರವನ್ನು ಸೇವಿಸಿಯೇ ಹೋಗುತ್ತಾರೆ. ನಾಗೇಶ ಶೆಟ್ಟಿ ಯವರು ಯಾವತ್ತಿಗೂ ಯಾರೊಂದಿಗೂ ಅಸಭ್ಯವಾಗಿ ವರ್ತಿಸಿದವರಲ್ಲ. ತಾಳ್ಮೆಯಿಂದಲೇ ಹೋಟೆಲಿಗೆ ಬಂದ ಗಿರಾಕಿಗಳೊಂದಿಗೆ ಅಣ್ಣಾವರ, ತಮ್ಮಾವರ, ತಂಗಿಯವರ, ಅಕ್ಕನವರೆ ಎಂದು ಮಾತನಾಡುತ್ತಾ ಅವರ ಮನಸ್ಸು ಗೆಲ್ಲುವ ಹೃದಯವಂತಿಕೆ ನಾಗೇಶ ಶೆಟ್ಟಿಯವರ ಉದಾತ್ತ ಗುಣವಾಗಿದೆ. ತಾವೂ ಒಬ್ಬ ಕೋಟ್ಯಾಂತರ ಬೆಲೆ ಬಾಳುವ ಹೋಟೆಲಿನ ಮಾಲೀಕ ಅನ್ನುವದನ್ನು ಮರೆತು ಶ್ರೀಸಾಮಾನ್ಯರೊಂದಿಗೆ ಬೆರೆತು ಹೋಟೆಲನಲ್ಲಿ ತುಂಬಾ ಗಿರಾಕಿಗಳಿಂದ ತುಂಬಿದ

ಸಮಯದಲ್ಲಿ ತಾವೇ ಸ್ವತಃ ತಾಟ ತೆಗೆದು ಟೇಬಲ್ ಸಪ್ಲಾಯ್ ಮಾಡಿ ತಮ್ಮ ಕರ್ತವ್ಯ ಪ್ರಜ್ಞೆಯನ್ನು ಸೇವಾ ಮನೋಭಾವನೆಯನ್ನು ಮೆರೆಯುತ್ತಾರೆ. ಇದೇನು ಉತ್ಪ್ರೇಕ್ಷೆಯ ಮಾತಲ್ಲ ಅತಿಶಯೋಕ್ತಿಯಂತೂ ಅಲ್ಲವೇ ಅಲ್ಲ. ಮೈಸೂರ ರೆಸ್ಟೋರೆಂಟಿಗೆ ಯಾರಾದರೂ ಬಂದಿದ್ದರೆ ನನ್ನ ಮಾತಿನ ಸತ್ಯಾಸತ್ಯತೆ ಅರ್ಥವಾದೀತು. ಅವರದು ದಾನ ಧರ್ಮದಲ್ಲಿಯೂ ಎತ್ತಿದ ಕೈ. ದಿನಾಲೂ ಎಷ್ಟೋ ಜನರು ಸಮಸ್ಯೆಗಳನ್ನು ತಮ್ಮ ಪ್ರಾಪಂಚಿಕ ಅಡಚಣೆಗಳನ್ನು ಹೇಳಿ ಅನೇಕ ಜನ ಇವರಿಂದ ಸಹಾಯ ಪಡೆದುಕೊಂಡಿದ್ದಾರೆ. ಇವರನ್ನು ಆ ಜನ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ. ಹೀಗೆ ನಾಗೇಶ ಶೆಟ್ಟಿಯವರು ನಿಜಕ್ಕೂ ಒಬ್ಬ ಅಪರೂಪದ ವ್ಯಕ್ತಿ. "ಪುಣ್ಯಭೂಮಿ ಭರತ ಭೂಮಿ ನನ್ನ ಪೊರೆವತೊಟ್ಟಿಲು" ಎಂಬ ಕವಿವಾಣಿಯಂತೆ ನಾಗೇಶ ಶೆಟ್ಟಿಯವರನ್ನು ಆಶ್ರಯಿಸಿ ಬಂದವರಿಗೆ ಸಹಾಯ ಹಸ್ತ ನೀಡಿ ಎಷ್ಟೋ ಜನರನ್ನು ರಕ್ಷಿಸಿದ್ದಾರೆ. ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಔದಾರ್ಯತೆ ಇವರಲ್ಲಿ ರಕ್ತಗತವಾಗಿ ಬಂದಿದೆ.

**ಬಿರು ಬಿಸಿಲ ನೆಲದಲ್ಲಿ ಮೂಡಿದ ಗುಲಾಬಿ ಗಿಡದ ಇವರು**
**ತಾವೇ ಮುಳ್ಳುಗಳ ನಡುವೆ ಹೂವಾಗಿ ಬೆಳಗಿದರು.**
**ಬಗೆ ಬಗೆ ಹೂವುಗಳ ಅರಳಿಸುವ ಬೆಳಕಾದರು ಇಲ್ಲಿ**
**ನೆಲದಲ್ಲಿ ಬೇರಿಳಿಸಿ ನಭದತ್ತ ಚಿಮ್ಮಿದರು.**

ಮನುಷ್ಯನು ಹುಟ್ಟಿಬಂದ ಮೇಲೆ ಗುಣ ಸಂಪನ್ನನಾಗಿ ಜನಹಿತವನ್ನೇ ಗುರಿಯಾಗಿಟ್ಟುಕೊಂಡು ಅದಕ್ಕಾಗಿ ತನು ಮನ ಧನಗಳನ್ನರ್ಪಿಸಿ ಜೀವನ ಸಾರ್ಥಕವಾಗಿಸಿ ಕೊಂಡಿರುವವರು ತುಂಬಾ ವಿರಳ. ಅಂಥ ವಿರಳ ವ್ಯಕ್ತಿಗಳ ಪಂಕ್ತಿಯಲ್ಲಿ ನಾಗೇಶ ಶೆಟ್ಟಿಯವರ ಹೆಸರು ಅಗ್ರಗಣ್ಯ. "ವೃಕ್ಷಾಣಾಂ ಜೀವನಂ ಧನ್ಯ, ವೃಕ್ಷಾಹಃ ಸತ್ಪುರುಷಾಯುವ" ಎಂಬ ಸುಭಾಷಿತದ ಹಾಗೆ ವೃಕ್ಷಗಳ ಜೀವನಧನ್ಯ ವೃಕ್ಷಗಳು ಸತ್ಪುರುಷರಂತೆ ಸದಾ ಪರೋಪಕಾರದಲ್ಲಿ ತಮ್ಮ ಜೀವನ ಸಾರ್ಥಕಮಾಡಿಕೊಂಡಂತೆ ಶ್ರೀ ನಾಗೇಶ ಶೆಟ್ಟಿಯವರು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡವರು.

ಶಿಸ್ತುಬದ್ಧ ಆದರ್ಶ ಜೀವನ ಅವರದು. ಮಕ್ಕಳಿಂದ ಹಿಡಿದು ವೃದ್ಧರವರೆಗೆ ಸಮತೆಯಿಂದ ಕಾಣುವ ಶರಣರಗುಣ ಅವರದು. ಪ್ರೀತಿ ವಾತ್ಸಲ್ಯದ ಅಮೃತ ಕುಂಭ ಎಂದು ಹೇಳಿದರೆ ತಪ್ಪಾಗದು. ಅವರೊಬ್ಬ ಗುಣ ಗ್ರಾಹಿಗಳು. ಒಳ್ಳೆಯದನ್ನು ಕಂಡಾಗ ಒಳ್ಳೆಯ ಮಾತನ್ನು ಕೇಳಿದಾಗ ಅವರು ತಮ್ಮ ಸ್ಥಾನಮಾನ ಮರೆತು ಹೃದಯಾರೆ ಅಭಿನಂದಿಸುವ ಹಿರಿಯ ಗುಣ ಅವರಲ್ಲಿದೆ. ಕನ್ನಡದ ಭಾಷೆ ಸಾಹಿತ್ಯ ಇತಿಹಾಸ ಸಂಸ್ಕೃತಿ-ಪರಂಪರೆಗಳನ್ನು ಕುರಿತು ಪ್ರೀತಿ-ಅಭಿಮಾನ- ಕಾಳಜಿ-ಕಳಕಳಿ ಅನನ್ಯವಾದುದು. ತೂಕಬದ್ಧವಾದ ಮಾತು, ಸರಳ ನಡೆನುಡಿ ಯಾರ ಭಾವನೆಗಳಿಗೂ ಧಕ್ಕೆ ತರದೆ ಇರುವ ಸನ್ನಡತೆ, ಇವ ನಮ್ಮವ ಇವ ನಮ್ಮವ ಎಂಬ ಆತ್ಮೀಯತೆ ಭಾವ, ಸರಳ ಜೀವನದಿಂದ ಸೌಜನ್ಯಯುತವಾದ ಮಾತಿನಿಂದ ಸೂಕ್ಷ್ಮ ಸಂವೇದನಾಶೀಲತೆಯಿಂದ ಎಲ್ಲರೊಂದಿಗೆ ಬೆರೆಯುವ ಪಾರದರ್ಶಕ ವ್ಯಕ್ತಿತ್ವ ನಾಗೇಶ ಅವರದು. ಹಿತಮಿತ ಮೃದು ಮಾತುಗಳಿಂದ ಎಂಥವರನ್ನೂ ಒಲಿಸಿಕೊಂಡು, ಒಳ್ಳೆಯ ಸ್ವಭಾವದ ಸದಾ ಸಜ್ಜನರ ಒಡನಾಟ, ಸುಸಂಸ್ಕೃತ ನಡೆನುಡಿ, ಸಮಯಪ್ರಜ್ಞೆ, ಕರ್ತವ್ಯ-ನಿಷ್ಠೆ ಮುಂತಾದ ಉದಾತ್ತ ಗುಣಸ್ವಾಭಾವಗಳಿಂದ ಸರ್ವಾದರಣೀಯ ವ್ಯಕ್ತಿಯಾಗಿದ್ದಾರೆ. ಪ್ರೀತಿ, ವಾತ್ಸಲ್ಯ, ವಿನಯ, ತಾಳ್ಮೆ, ದಯೆ ನಿಗರ್ವಿ, ನಿಸ್ವಾರ್ಥ, ಸತ್ಯ ಎನ್ನುವ ಜೀವನ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಂಧು-ಭಾಂಧವರಿಗೂ, ಸರ್ವಜನರಿಗೂ ಸಮಾಜಕ್ಕೂ ಸ್ನೇಹಿತರಿಗೂ, ಒಳ್ಳೆಯವರಾಗಿ ಬದುಕುತ್ತಿದ್ದಾರೆ. ಓರ್ವವ್ಯಕ್ತಿಯ ವ್ಯಕ್ತಿತ್ವಕ್ಕೆ ಹಲವಾರು ಆಯಾಮುಗಳಿರುತ್ತವೆ. ಅವರೊಂದಿಗೆ ನಾವಾಗಲೀ ನಮ್ಮೊಂದಿಗೆ ಅವರಾಗಲಿ ಗುರುತಿಸಿಕೊಂಡಾಗ ಆ ವ್ಯಕ್ತಿಯ ವ್ಯಕ್ತಿತ್ವದ ಪರಿಚಯ ನಮಗಾಗುತ್ತದೆ. ಉತ್ತಮ ಧ್ಯೇಯವನ್ನು ಹೊಂದಿ ಉನ್ನತ ಬಾಳನ್ನು ನಡೆಯಿಸುವ ವ್ಯಕ್ತಿ ತನ್ನ ಸುತ್ತಮುತ್ತಲಿನ ಪರಿಸರದ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರುತ್ತಾನೆ. ನಾಗೇಶ ಶೆಟ್ಟಿಯವರನ್ನು ಕುರಿತು ಮಾತನಾಡುವಾಗ ಸಿದ್ಧಯ್ಯ ಪುರಾಣಿಕರ ಒಂದು ಪದ್ಯ ನೆನಪಾಗುತ್ತದೆ.

**"ಫಲಬಿಟ್ಟ ರೆಂಬೆ ಬಾಗುತ್ತದೆ.**
**ಗೊನೆ ಹೊತ್ತ ಬಾಳೆ ಬಾಗುತ್ತದೆ.**
**ತೆನೆಹೊತ್ತ ದಂಟು ಬಾಗುತ್ತದೆ"**

ಇಂತಹ ವಿಶಿಷ್ಟತೆಗಳ ರೆಂಬೆ, ಬಾಳೆ, ದಂಟುಗಳಂತೆ ಶ್ರೀ ನಾಗೇಶ ಶೆಟ್ಟಿಯವರು ಎಲ್ಲರೊಂದಿಗೆ ವಿನೀತ ಭಾವದಿಂದ ಬಾಗಿ ಬಾಗಿ ಸರಳ ಸಜ್ಜನಿಕೆಯಿಂದ ಔಚಿತ್ಯದ ಎಲ್ಲೆ ಮೀರಿದಂತೆ ಪಕ್ವವಾದ ನಡೆನುಡಿಯಿಂದ ಬಹುಕಾಲ ಜನಮಾನಸದಲ್ಲಿ ಉಳಿಯಬಲ್ಲ ವ್ಯಕ್ತಿಯಾಗಿದ್ದಾರೆ. ಪಾದರಸದಂತೆ ಸರಸರನೆ ಓಡಾಡುವ ಎಲ್ಲರೊಂದಿಗೆ ಸರಾಗವಾಗಿ ಬೆರೆಯುವ, ಬಿಡುವಿಲ್ಲದ ಕೆಲಸದಲ್ಲೂ ಬಂದವರ ಯೋಗಕ್ಷೇಮ ವಿಚಾರಿಸುವ, ಮುಗುಳ್ನಗೆಯಿಂದ ಸತ್ಕರಿಸುವ ಪರಿ ಯಾರನ್ನೂ ಬೆರಗುಗೊಳಿಸುವಂಥದ್ದು.



Scanned by CamScanner

ಬಸವಣ್ಣನವರ ಒಂದು ವಚನದಂತೆ

ನಡೆಚೆನ್ನ, ನುಡಿಚೆನ್ನ, ಎಲ್ಲಿನೋಡಿದಡಲ್ಲಿ ಚೆನ್ನ!
ಪ್ರಮಥರೊಳಗೆಚೆನ್ನ, ಪುರಾತರೊಳಗೆ ಚೆನ್ನ,
ಸವಿನೋಡಿ ಅಂಬಲಿ ರುಚಿಯಾಯಿತ್ತೆಂದು
ಕೂಡಲಸಂಗಮದೇವಂಗೆ ಬೇಕೆಂದರೆ ಕೈದೆಗೆದ ನಮ್ಮ ಚೆನ್ನ.

ನುಡಿ ಚೆನ್ನಾಗಿರುವ ಜನ ಸಾಕಷ್ಟು ಸಿಗುತ್ತಾರೆ. ನಡೆಚೆನ್ನಾಗಿರುವವರು ತುಂಬಾ ವಿರಳ ಈ ಹದವಾದ ಸಂಸ್ಕಾರವೇ ವ್ಯಕ್ತಿತ್ವವಾಗಿ ಪ್ರತಿಫಲನಗೊಳ್ಳುತ್ತದೆ.

ಏನಾನುಮಂ ಮಾಡು ಕೈಗೆ ದೊರೆತುದ್ಜುಗವ
ನಾನೇನು ಹುಲ್ಲು ಕಡ್ಡಿಯೆಂಬ ನುಡಿಬೇಡ
ಹೀನಮಾವುದುಮಿಲ್ಲ ಜಗದ ಗುಡಿಯೊಳಗದಿ
ತಾಣನಿನಗಿಹುದಲ್ಲಿ ಮಂಕುತಿಮ್ಮ

ಡಿ.ವಿ.ಜಿಯವರ ಈ ಮಾತು ಎಲ್ಲರನ್ನು ಚಿಂತನೆಗೆ ಹಚ್ಚುವಂತಿದೆ. ಏನಾದರೂ ಮಾಡುತ್ತಿರು-ಅಂದರೆ ಒಳ್ಳೆಯದನ್ನು ಮಾಡಬೇಕು ಎಂದರ್ಥ. "ಉದ್ಯೋಗಂ ಪುರುಷ ಲಕ್ಷಣಂ" ಎಂಬ ಮುತ್ತಿನಂಥ ಮಾತೊಂದಿದೆ. ಕೆಲಸದಲ್ಲಿ ನಿರಂತರವಾಗಿ ನಿರತನಾಗಿರೋದು ಕ್ರಿಯಾಶೀಲ ವ್ಯಕ್ತಿಯ ಲಕ್ಷಣ, ನಾವಿದ್ದಲ್ಲಿಗೆ ಕೆಲಸ ಬರುವದಿಲ್ಲ. ಕೆಲಸವಿದ್ದಲ್ಲಿ ನಾವು ಹೋಗಬೇಕು. ಅಂತೆಯೇ ಬೆಳಕು ಬೇಕಾದರೆ ಅದು ಇದ್ದಲ್ಲಿಗೆ ಹೋಗಬೇಕು ಕೆಲಸ ಯಾವುದೇ ಇರಲಿ ಉದ್ಯೋಗಸ್ಥನಿಗೆ ಲಕ್ಷ್ಮೀ ಒಲಿಯುತ್ತಾಳೆ. ಕಾಯಕಕ್ಕೆ ಪರ್ಯಾಯವಾದುದು ಇನ್ನೊಂದಿಲ್ಲ. ಕೆಲಸ ಯಾವುದೇ ಇರಲಿ ಹಿರಿದು ಕಿರಿದು ಎನ್ನದೆ ಮಾಡಬೇಕು. ಕಾಯಕದಲ್ಲಿ ಕೈಲಾಸವನ್ನು ಕಾಣಬೇಕು. ಕೆಲಸ ಮಾಡುವವನ ಮನಸ್ಸು ಸ್ವಚ್ಛವಾಗಿರಬೇಕು. ಅಲ್ಪವಿಚಾರಗಳತ್ತ ಹರಿಯುವದಿಲ್ಲ ಅದು ವ್ಯಕ್ತಿಯ ವಿಕಾಸಕ್ಕೆ ಕಾರಣವಾದಂತೆ ಸಮಷ್ಠಿಯ ಒಳಿತಿಗೆ ದಾರಿಯಾಗುತ್ತದೆ. ಮಾನವ ಜನ್ಮ ಪಡೆದಿರೋದೇ ಕೆಲಸ ಮಾಡಲು ವಿನಾಕಾರಣ ವ್ಯರ್ಥವಾಗಿ ಕಾಲ ಹಾಳುಮಾಡಬಾರದು ಎಂದು ಒಂದು ಜನಪದ ತ್ರಿಪದಿ ಕಾಯಕದ ಸಂದೇಶವನ್ನು ಸಾರುತ್ತದೆ.

ಮರ್ತ್ಯಕ್ಕೆ ಬಂದೀದಿ ಕರ್ತವ್ಯ ಮಾಡಾಕ
ಮರ್ತ ನೀ ಕುಂತ್ಯಾಕ! ಮೃತ್ಯು ಒಯ್ದೀತು
ತುರ್ತ ಮಾಡಣ್ಣ ನಿನ್ನ ಕೆಲಸ

ಎಂಬ ಈ ಮೇಲಿನ ದಿವ್ಯ ಸಂದೇಶವನ್ನು ಅಕ್ಷರಶಃ ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಶ್ರೀ ನಾಗೇಶ ಶೆಟ್ಟಿಯವರು ಸದ್ದಿಲ್ಲದೆ ಕಾಯಕ ಮಾಡುತ್ತ ಸಾರ್ಥಕ ಬದುಕನ್ನು ಬದುಕುತ್ತಿದ್ದಾರೆ. "ಶ್ರದ್ಧಾವಾನ್ ಲಭತೇ ಎಂಬ ಉಕ್ತಿಯಂತೆ ಶ್ರದ್ಧೆ, ಭಕ್ತಿ, ನಿಷ್ಠೆಯಿಂದ ನಡೆಯುತ್ತಿದ್ದಾರೆ.

ಪ್ರತಿಯೊಬ್ಬರ ಜನನದ ಹಿಂದೆ ದೇವರು ಒಂದು ಉದ್ದೇಶವನ್ನು ಇಟ್ಟು ಕಳಿಸಿರುತ್ತಾನೆ. ಯಾರು ಆ ಪರಮಾತ್ಮನ ಉದ್ದೇಶವನ್ನು ಅರ್ಥೈಸಿಕೊಂಡು ತಮ್ಮ ಹುಟ್ಟು ಸಾರ್ಥಕವಾಗಬೇಕೆಂದು ಬಯಸಿ ಬದುಕುತ್ತಾರೋ ಅಂಥವರೇ ಏನನ್ನಾದರೂ ಸಾಧಿಸಿತೋರಿಸುತ್ತಾರೆ. ಇಂತಹ ಅಪರೂಪದ ವ್ಯಕ್ತಿಗಳಲ್ಲಿ ನಾಗೇಶ ಶೆಟ್ಟಿಯವರ ಹೆಸರನ್ನು ಗಮನಿಸಬೇಕು. ಇವರು ವಿಜಯಪುರದ ಸಾಂಸ್ಕೃತಿಕ ಬದುಕಿನ ರಾಯಭಾರಿ, ಧಾರ್ಮಿಕ, ಸಾಮಾಜಿಕ, ಸಾಹಿತ್ಯ, ಕಲೆ, ಸಂಸ್ಕೃತಿ ಚಟುವಟಿಕೆಗಳಿಗೆ ಉಸಿರು ತುಂಬಿದ ವ್ಯಕ್ತಿ. ಇಂತಹ ಉದಾತ್ತ ಗುಣ ನಾಗೇಶ ಅವರಿಗೆ ಅವರ ತಂದೆಯಿಂದ ಬಳುವಳಿಯಾಗಿ ಬಂದಿದೆ ಎಂದರೆ ತಪ್ಪಾಗಲಾರದು.

ನಯ ವಿನಯ ಸಂಪನ್ನನಾದ ವ್ಯಕ್ತಿ ಸಹಜವಾಗಿ ಎಲ್ಲರ ಗಮನ ಸೆಳೆಯುತ್ತಾನೆ. ಜನರ ಪ್ರೀತಿ-ವಿಶ್ವಾಸಗಳಿಗೂ ಪಾತ್ರನಾಗುತ್ತಾನೆ. ಸಮಾಜದಲ್ಲಿ ಸದ್ಗುಣಶೀಲನೆನಿಸಿ ಬಾಳುತ್ತಾನೆ, ಬಾಳು ಬೆಳಗುತ್ತಾನೆ. ವ್ಯಕ್ತಿಯಲ್ಲಿರುವ ಧನ, ಯೌವ್ವನ, ಅಧಿಕಾರ, ವಿದ್ಯೆ ಮೊದಲಾದವುಗಳಿಗೆ ಬೆಲೆ ಬರುವುದು ಆ ವ್ಯಕ್ತಿಯ ನಯ ವಿನಯ ಹಾಗೂ ಸರಳ ಸಜ್ಜನಿಕೆಗಳಿಂದ ಆ ಕಾರಣಕ್ಕಾಗಿಯೇ 'ವಿದ್ಯಾವಿನಯೇನ ಶೋಭತೆ' ಎಂದು ಹೇಳಿದ್ದಾರೆ. ಅಂದರೆ ವಿದ್ಯೆಯಿಂದ ವಿನಯ, ವಿನಯದಿಂದ ಗೌರವಾದರಗಳನ್ನು ಪಡೆದ ವ್ಯಕ್ತಿ ಶ್ರೀಮಂತನಾಗುತ್ತಾನೆ. ತನ್ನಲ್ಲಿರುವ ಧನದಿಂದ ಧರ್ಮ ಕಾರ್ಯಗಳನ್ನು ನೆರವೇರಿಸುತ್ತ ಸುಧೀರ್ಘ ಕಾಲ ಸುಖಿಯಾಗಿ ಬಾಳುತ್ತಾನೆ. ಆದ್ದರಿಂದ ಗರ್ವದಿಂದ ಬೀಗದೆ ನಮ್ರತೆಯಿಂದ ಬಾಗುವುದೇ ಹಿತಕರವಾದುದು. ಸರ್ವಾರ್ಪಣ ಮನೋಭಾವದಿಂದ ಜನಸೇವೆ ಮಾಡುವ ಮೃದುವಚನದ ಸದ್ಗುಣಶೀಲ ವಿನಯಗುಣದ ಶ್ರೀ ನಾಗೇಶ ಶೆಟ್ಟಿಯವರು 'ಸದುವಿನಯವೇ ಸದಾಶಿವನ ಒಲುಮೆಯಯ್ಯ' ಎಂಬ ಬಸವವಾಣಿಯ ಈ ನುಡಿಗೆ ನಿದರ್ಶನವಾಗಿದ್ದಾರೆ.

ಮಮತೆ ತುಂಬಿದ ಸಾಕಾರಮೂರ್ತಿ
ಮೇಣದಂತೆ ಕರಗುವ ಮನಸು
ಹಿಡಿದ ಕೆಲಸ ಬಿಡದೆ ಮಾಡುವಛಲ
ಹರಡಲಿ ಇವರ ಕೀರ್ತಿ ದಿಕ್ ದಿಗಂತದಿ.

■■

ಮುಖ್ಯಸ್ಥರು, ಕನ್ನಡ ವಿಭಾಗ, ಬಿ.ಎಲ್.ಡಿ. ಬಸವೇಶ್ವರ ಪದವಿ ಮಹಾವಿದ್ಯಾಲಯ - ಬಸವನ ಬಾಗೇವಾಡಿ



Scanned by CamScanner